# ಕನ್ನಡ ವಿಷಯ ಶಿಕ್ಷಕರ ಸಮೂಹ ಜಮಖಂಡಿ

## ಹತ್ತನೆಯ ತರಗತಿಯ ಪ್ರಥಮ ಭಾಷೆ ಕನ್ನಡದ ವ್ಯಾಕರಣಾಂಶಗಳ ಸಂಗ್ರಹ







ಸಂಗ್ರಹ - ಶ್ರೀ ಡಿ . ವ್ಹಿ .ಹಿರೇಮಠ , ಎಂ.ಎ , ಬಿ.ಇಡಿ, ಡಿ.ಎಫ್.ಎ.
ಶ್ರೀ ಆರ್.ಎಸ್.ಅವಟಿ , ಎಂ.ಎ. ಬಿ.ಇಡಿ

# ಪರಿವಿಡಿ


| ಕ್ರ.ಸಂ | ವಿಷಯ | ಪು.ಸಂ |
|---|---|---|
| ೦೧ | ವರ್ಣಮಾಲೆ | ೩ |
| ೦೨ | ಸಂಯುಕ್ತಾಕ್ಷರಗಳು | ೩ |
| ೦೩ | ಸಂಧಿಗಳು | ೩-೪ |
| ೦೪ | ತತ್ಸಮ – ತದ್ಭವ | ೪-೫ |
| ೦೫ | ಸಮಾಸಗಳು | ೫-೫ |
| ೦೬ | ಅನ್ಯದೇಶ್ಯ ಪದಗಳು | ೬-೬ |
| ೦೭ | ತದ್ಧಿತಾಂತಗಳು | ೬-೭ |
| ೦೮ | ಕೃದಂತಗಳು | ೭ |
| ೦೯ | ದ್ವಿರುಕ್ತಿ | ೭ |
| ೧೦ | ಜೋಡುನುಡಿ | ೭-೮ |
| ೧೧ | ಅವ್ಯಯ | ೮ |
| ೧೨ | ನಾಮಪದ | ೮-೯ |
| ೧೩ | ಸರ್ವನಾಮ | ೯-೧೦ |
| ೧೪ | ಕ್ರಿಯಾಪದ | ೧೦ |
| ೧೫ | ವಿಭಕ್ತಿ ಪ್ರತ್ಯಯಗಳು | ೧೦ |
| ೧೬ | ಲೇಖನ ಚಿಹ್ನೆಗಳು | ೧೧ |
| ೧೭ | ವಾಕ್ಯ ಪ್ರಭೇದಗಳು | ೧೧-೧೨ |
| ೧೮ | ಅಲಂಕಾರ | ೧೨-೧೫ |
| ೧೯ | ಛಂದಸ್ಸು | ೧೫-೧೯ |

## ೧) ವರ್ಣಮಾಲೆ

### ಅ) ಸ್ವರಗಳು (೧೩)

ಅ ಆ ಇ ಈ ಉ ಊ ಋ ಎ ಏ ಐ ಒ ಓ ಔ

* ಹ್ರಸ್ವ ಸ್ವರಗಳು (೬)–ಅ ಇ ಉ ಋ ಎ ಒ

*ದೀರ್ಘ ಸ್ವರಗಳು (೭)–ಆ ಈ ಊ ಏ ಐ ಓ ಔ ( ಸಂಧ್ಯಕ್ಷರಗಳು – ಐ ಔ)

### ಬ) ವ್ಯಂಜನಗಳು (೩೪)

* ವರ್ಗೀಯ ವ್ಯಂಜನಗಳು (೨೫)

ಕ್ ಖ್ ಗ್ ಘ್ ಙ್ ( ಕಂಠ್ಯಾಕ್ಷರಗಳು)

ಚ್ ಛ್ ಜ್ ಝ್ ಞ್ (ತಾಲುವ್ಯಾಕ್ಷರಗಳು )

ಟ್ ಠ್ ಡ್ ಢ್ ಣ್ (ಮೂರ್ಧನ್ಯಾಕ್ಷರಗಳು)

ತ್ ಥ್ ದ್ ಧ್ ನ್ ( ದಂತ್ಯಾಕ್ಷರಗಳು)

ಪ್ ಫ್ ಬ್ ಭ್ ಮ್ (ಓಷ್ಠ್ಯಾಕ್ಷರಗಳು )

* ಅಲ್ಪಪ್ರಾಣಾಕ್ಷರಗಳು – ಕ್ ಚ್ ಟ್ ತ್ ಪ್ , ಗ್ ಜ್ ಡ್ ದ್ ಬ್

* ಮಹಾಪ್ರಾಣಾಕ್ಷರಗಳು – ಖ್ ಛ್ ಠ್ ಥ್ ಫ್ , ಘ್ ಝ್ ಢ್ ಧ್ ಭ್

* ಅನುನಾಸಿಕಗಳು – ಙ್ ಞ್ ಣ್ ನ್ ಮ್

* ಅವರ್ಗೀಯ ವ್ಯಂಜನಗಳು – ಯ್ ರ್ ಲ್ ವ್ ಶ್ ಷ್ ಸ್ ಹ್ ಳ್

**ಕ) ಯೋಗವಾಹಗಳು** – ಅನುಸ್ವಾರ ಂ

ವಿಸರ್ಗ ಃ

## ೨) ಸಂಯುಕ್ತಾಕ್ಷರಗಳು

★ ಸಜಾತಿಯ ಸಂಯುಕ್ತಾಕ್ಷರಗಳು

ತಮ್ಮ , ಎನ್ನ , ಹಣ್ಣು , ಮೆಚ್ಚು ,ಅಪ್ಪ , ಅಕ್ಕ , ಅಜ್ಜ , ಕಜ್ಜ .

★ ವಿಜಾತಿಯ ಸಂಯುಕ್ತಾಕ್ಷರಗಳು

ಸೂರ್ಯ , ಶ್ರಮಣಿ , ಲಕ್ಷ್ಮಣ , ಪುತ್ರ , ಪ್ರವೇಶ ,ಹೊಗಳ್ತೆ ,ಸದ್ಗುಣ ,ಅಗ್ನಿ .

## ೩) ಸಂಧಿಗಳು

### * ಲೋಪ ಸಂಧಿ

ಊರೂರು , ಬಲ್ಲೆನೆಂದು , ಮಾತಂತು ,ಸಂಪನ್ನರಾದ ,ಒಬ್ಬೊಬ್ಬ , ಈಗೀಗ ,ಕಾಣಲಾಗದು ,ತಪ್ಪಲೀಯದೆ ,ತಕ್ಕನಿತು , ಪೂಲ್ದೆಡೆ , ಇರುಳಳಿದು ,ತೆರೆದಿಕ್ಕುವ , ಮನದೊಳಗೆ , ಚರಿಸುತದ್ವರದ , ಲೇಖನವನೋದಿ , ತೆಗೆದುತ್ತರೀಯಮ್ , ಬೇಡಬೇಡರಸುಗಳ , ನಿಂತಿರ್ದನು ,ಕಾದಾಟದಾಟ , ಆದನೆಂಬ , ನೆತ್ತರೊಂದೆ ,ಜೀವತೆತ್ತವರು , ಬಂದಲ್ಲದೆ , ಮನದೊಳಗೆ .

* **ಆಗಮ ಸಂಧಿ**

ಕೈಯನ್ನು , ಮಳೆಯಿಂದ ,ಶಾಲೆಯಲ್ಲಿ , ಮರವನ್ನು , ಮಗುವಿಗೆ , ಭೇದವಿಲ್ಲ , ವೃದ್ಧಿಯಾಗಿ ,ಭೇದವಾಗಿ , ಶವವಾದವು , ಮನೆಯೊಳಗೆ ,ಗಡಿಯಿಲ್ಲ ,.

* **ಆದೇಶ ಸಂಧಿ**

ಮಳೆಗಾಲ , ಮೈದೋರು , ಬೆಂಬತ್ತು , ಕಡುವೆಳ್ಪು , ಮೆಲ್ವಾತು , ಕೈವಿಡಿದು , ಧೃತಿಗೆಟ್ಟು , ಪೋಗಲ್ವೇಳ್ಕುಂ , ಹೊಸಗಾಲ , ಬಲ್ಗಯ್ಯ , ಬಿಲ್ಗೊಂಡು ,ಪೂದೋಟ , ಒಳಗಣ್ಣು , ಬಾಗಿಲುಗಟ್ಟಳೆ ,ತೇಜಗೆಡೆ ,ಮತಿಗೆಟ್ಟು , ವಿಸ್ಮಯಂಬಟ್ಟು .

* **ಸವರ್ಣದೀರ್ಘ ಸಂಧಿ**

ಮಹಾತ್ಮ , ಗಿರೀಶ , ಸುರಾಸುರ ,ವಧೂಪೇತ , ಸಕಳಾಚಾರ್ಯ , ಚಂದ್ರಾರ್ಕ ,ಜಿನಾಲಯ ,ನಿಜಾಶ್ರಮ ,ಗೃಹಸ್ಥಾಶ್ರಮ , ರಾಮಾಯಣ , ಪರಮಾನಂದ ,ಬ್ರಹ್ಮಾಸ್ತ್ರ , ವದನಾರವಿಂದ , ಪ್ರಾಣಾಹುತಿ .

* **ಗುಣಸಂಧಿ**

ದೇವೇಂದ್ರ , ಜ್ಞಾನೇಶ್ವರ , ಸೂರ್ಯೋದಯ , ಮಹರ್ಷಿ , ಮಹೇಶ, ಮಂಡಳೇಶ್ವರ , ಬ್ರಹ್ಮರ್ಷಿ , ನವೋದಯ , ವಿಶ್ವೇಶ್ವರಯ್ಯ , ಜ್ಞಾನೋದಯ ,ಪ್ರಶ್ನೋತ್ತರ , ಮಹೋನ್ನತ , ಶತಮಾನೋತ್ಸವ , ಘ್ರಾಣೇಂದ್ರಿಯ , ಪಂಚೇಂದ್ರೀಯ .

* **ವೃದ್ಧಿ ಸಂಧಿ**

ಏಕೈಕ , ಜನೈಕ್ಯ , ವನೌಷಧಿ , ಅಷ್ಟೈಶ್ವರ್ಯ .

* **ಜಶ್ತ್ವ ಸಂಧಿ**

ವಾಗ್ದೇವಿ , ಅಜಂತಾ ,ಷಡಾನನ , ದಿಗಂತ ,ಅಬ್ಧಿ , ಸದ್ವಂಶ , ದಿಗ್ಭ್ರಮೆ .

***ಯಣ್ ಸಂಧಿ**

ಮನ್ವಂತರ ,ಅತ್ಯವಸರ ,ಜಾತ್ಯತೀತ , ಕೋಟ್ಯಧೀಶ್ವರ , ಕೋಟ್ಯನುಕೋಟಿ , ಅತ್ಯಂತ , ಗತ್ಯಂತರ.

* **ಶ್ಚುತ್ವ ಸಂಧಿ**

ಪಯಶ್ಶಯನ , ಶರಚ್ಚಂದ್ರ , ಜಗಜ್ಜ್ಯೋತಿ ,ಬೃಹಚ್ಛತ್ರ , ವಿದ್ಯುಚ್ಛಕ್ತಿ .

***ಅನುನಾಸಿಕ ಸಂಧಿ**

ಷಣ್ಮುಖ ,ಸನ್ಮಾನ ,ವಾಙ್ಮಯ ,ಉನ್ಮಾದ , ತನ್ಮಯ , ಶ್ರೀಮನ್ಮಹಾ .

## ೪) ತತ್ಸಮ – ತದ್ಭವ

| | | |
|---|---|---|
| ದೃಷ್ಟಿ – ದಿಟ್ಟಿ | ತಪಸ್ವಿ – ತವಸಿ | ಗ್ರಹ – ಗರ |
| ವಿಜ್ಞಾನ – ಬಿನ್ನಾಣ | ಮುಖಶಾಲೆ –ಮೊಗಸಾಲೆ | ದಾತೃ – ದಾತಾರ |
| ವಿಜ್ಞಾಪನೆ – ಬಿನ್ನಹ | ಸಾಮಂತ – ಸಾವಂತ | ಸುಧೆ – ಸೊದೆ |
| ಅಮೃತ – ಅಮರ್ದು | ತಟ – ತಡಿ | ವರ್ಷ – ವರುಸ |
| ಶ್ರೀ – ಸಿರಿ | ರಾಯ – ರಾಜ | ವೀರ –ಬೀರ |
| ಭಕ್ತ – ಭಕುತ | ವ್ಯಾಘ್ರ – ಬಗ್ಗ | ದಿಶಾ – ದೆಸೆ |
| ಚಂದ್ರ – ಚಂದಿರ | ವಂಶ – ಬಂಚ | ಸ್ಥಾನ – ಠಾಣ |
| ಯಶ – ಜಸ | ಪಟ್ಟಣ – ಪತ್ತನ | ಕಾರ್ಯ – ಕಜ್ಜ |
| ವ್ಯಯ – ಬೀಯ | ಕೋಕಿಲಾ – ಕೋಗಿಲೆ | ವ್ಯಾಪಾರಿ – ಬೇಹಾರಿ |

| | |
|---|---|
| ಸಂದೇಹ – ಸಂದೇಯ | |
| ಪುಣ್ಯ – ಹೂನ್ಯ | |
| ಬ್ರಹ್ಮ – ಬೊಮ್ಮ | |
| ಕಲಶ – ಕಳಸ | |
| ವಂಧ್ಯಾ – ಬಂಜೆ | |
| ಕುಠಾರ – ಕೊಡಲಿ | |
| ಶುನಕ – ಸೊಣಗ | |
| ಯುದ್ಧ – ಜುದ್ದ | |

| |
|---|
| ಕಾವ್ಯ – ಕಬ್ಬ |
| ಕಣೆ –ಗಣೆ |
| ಶಶಿ – ಸಸಿ |
| ಅಂಕುಶ — ಅಂಕುಸ |
| ವಿದ್ಯಾಧರ – ಬಿಜ್ಜೋದರ |
| ಪಾದುಕಾ – ಹಾವುಗೆ |
| ಅಟವಿ – ಅಡವಿ |
| ಯಜ್ಞ – ಜನ್ನ |

| |
|---|
| ದೀವಿಗೆ – ದೀಪಿಕಾ |
| ಪಕ್ಷಿ – ಹಕ್ಕಿ |
| ಶಿರ – ಸಿರ |
| ದ್ಯೂತ – ಜೂಜು |
| ವೈಶಾಖ – ಬೇಸಗೆ |
| ಅರ್ಕ – ಎಕ್ಕ |
| ಪ್ರಸಾದ – ಹಸಾದ |
| ರಕ್ತ –ರಕುತ |

## ೨೮) ಸಮಾಸಗಳು

### ★ ತತ್ಪುರುಷ ಸಮಾಸ

ಬೆಟ್ಟದಾವರೆ , ತಲೆನೋವು , ಅರಮನೆ ,ದೈವಭಕ್ತಿ ,ಸ್ವಾಮಿದ್ರೋಹ , , ಪೂದೋಟ , ಕಾಲುಬಳೆ .

### ★ ಕರ್ಮಧಾರಯ ಸಮಾಸ

ಇಮ್ಮಾವು , ಮೆಲ್ಲಾತು , ಹೊಸಗನ್ನಡ , ಅತಿಕುಟಿಲ , ಕಟ್ಟೇಕಾಂತ , ಪೆರ್ಮಗ ,ಪೆರ್ಮರ , ನಲ್ಗುದುರೆ , ಹೆದ್ದೊರೆ , ಬೆಳದಿಂಗಳು .

### ★ ದ್ವಿಗು ಸಮಾಸ

ಮೂಗಾವುದ , ಮುಕ್ಕಣ್ಣು , ಸಪ್ತಸ್ವರಗಳು ,ಒಂದೇಟು , ಪಂಚೇಂದ್ರಿಯ .

### ★ ಬಹುವ್ರೀಹಿ ಸಮಾಸ

ಹಣೆಗಣ್ಣ , ಮುಕ್ಕಣ್ಣ , ಚಕ್ರಪಾಣಿ , ಘಟಸಂಭೂತ , ಗಾಂಡೀವಿ , ಪವನನಂದನ , ಇನತನೂಜ , ದನುಜರಿಪು ,ಮುರಾರಿ , ರಾಜೀವಸಖ , ಅಬ್ಜೋದರ . ಮದಾಂಧ , ಮೇದಿನಿಪತಿ.

### ★ ಅಂಶಿ ಸಮಾಸ

ಅಂಗೈ , ಹಿಂದಲೆ ,ಕಡೆಗಣ್ಣು , ಮುಂಗೈ , ನಡುರಾತ್ರಿ ,ನಟ್ಟಡವಿ .

### ★ ದ್ವಂದ್ವ ಸಮಾಸ

ಗಿರಿವನದುರ್ಗಗಳು , ಕರಿತುರಗರಥಗಳು ,ಹನುಮಭೀಮರಾಮ ,ಸೂರ್ಯಚಂದ್ರರು , ಮಾದ್ರಮಾಗಧಯಾದವರು , ಕೆರೆಕಟ್ಟೆಬಾವಿಗಳು .

### ★ ಕ್ರಿಯಾ ಸಮಾಸ

ಮೈಮುಚ್ಚು , ಕಣ್ದೆರೆ , ಕಂಗೆಡು , ಕೈಕೊಳ್ಳುದು , ಧನಹರಣ , ಸಾಕ್ಷಿಮಾಡಿ , ಬಲವಂದು ,ಸೊಲ್ಗೇಳಿ , ಬಿಲ್ಗೊಂಡು, ಬಿಲ್ದಿರುವನೇರಿಸಿ , ಮೈಮುರಿ .

### ★ ಗಮಕ ಸಮಾಸ

ಆ ಕಲ್ಲು , ಈ ಬೆಕ್ಕು , ನೆಯ್ದುವಸ್ತ್ರ .

# ೦೬) ಅನ್ಯದೇಶ್ಯ ಪದಗಳು

### * ಗ್ರೀಕ್ ಮತ್ತು ರೋಮನ್

| | | | | |
|---|---|---|---|---|
| ದಮ್ಮಡಿ | ದಮ್ಮ | ದಮಡಿ | ದೀನಾರ | ಗದ್ಯಾಣ |

### * ಫಾರ್ಸಿ (ಪರ್ಷಿಯನ್)

| | | | | | |
|---|---|---|---|---|---|
| ಅಬಕಾರಿ | ರಸ್ತೆ | ದವಾಖಾನೆ | ಚೌಕಾಷಿ | ಜಮೀನು | ಅಜಮಾಯಿಸಿ |
| ಆಮದು | ದಲ್ಲಾಳಿ | ಮಸಲತ್ತು | ಕಾರಕೂನ | ದಿವಾನ | |

### * ಅರಬ್ಬಿ

| | | | | | |
|---|---|---|---|---|---|
| ಅಮಾನತು | ಅಸಲು | ಇನಾಮು | ಕಾಯ್ದೆ | ಗಲೀಜು | ತಕರಾರು |
| ತರಬೇತು | ನಕಲಿ | ಸಾಹೇಬ | | | |

### * ಪೋರ್ಚುಗೀಸ್

| | | | | | |
|---|---|---|---|---|---|
| ಮೇಜು | ತಂಬಾಕು | ಅನಾನಸು | ಸಾಬೂನು | ಆಸ್ಪತ್ರೆ | ಚೊಂಬು |
| ಚಾ | ಇಸ್ತ್ರೀ | ರಸೀದಿ | | | |

### * ಉರ್ದು

| | | | | | |
|---|---|---|---|---|---|
| ಕಿಮ್ಮತ್ತು | ತಾರೀಖು | ತಾಲೂಕು | ಅಹವಾಲು | ಇಲಾಖೆ | ದರ್ಜೆ |
| ಬಂದೂಕು | ರುಜು | ಶುರು | ಶಾಮೀಲು | | |

### * ಹಿಂದೂಸ್ಥಾನಿ

| | | | | | |
|---|---|---|---|---|---|
| ಅರ್ಜಿ | ಕಚೇರಿ | ಕಾರ್ಖಾನೆ | ಸಲಾಮು | ದರ್ಬಾರು | ಕುರ್ಚಿ |
| ಕಾಗದ | ಹುಕುಂ | ಹತಾರ | ಸಿಪಾಯಿ | | |

### * ಇಂಗ್ಲಿಷ್

| | | | | | |
|---|---|---|---|---|---|
| ಬಸ್ಸು | ಕಾರು | ಕಾಲೇಜು | ಲೈಟು | ಪೆನ್ನು | ಡಿಪ್ಲೋಮಾ |
| ಸೋಪು | ಸ್ಯಾನೇಟರಿ | ಮ್ಯಾಜಿಕ್ | | | |

# ೭) ತದ್ಧಿತಾಂತಗಳು

## * ತದ್ಧಿತಾಂತ ನಾಮಗಳು

( ಪ್ರತ್ಯಯಗಳು – ಗಾರ ,ಕಾರ ,ವಂತ , ಇಗ ,ಆಡಿಗ , ಇಕ . ಸ್ತ್ರೀಲಿಂಗ ಪ್ರತ್ಯಯಗಳು – ಇತಿ , ಇತ್ತಿ ,ಗಿತ್ತಿ ,ತಿ .)

| |
|---|
| ಮೋಸಗಾರ |
| ಕನ್ನಡಿಗ |
| ಹಾವಾಡಿಗ |
| ಕನ್ನಡಿತಿ |

| |
|---|
| ಬಳೆಗಾರ |
| ಸಿರಿವಂತ |
| ಬಳೆಗಾರ್ತಿ /ಬಳೆಗಾರ್ತಿ |
| ಸಿರಿವಂತೆ |

| |
|---|
| ಕೋಲುಕಾರ |
| ಹೂವಾಡಿಗ |
| ಕೋಲುಕಾರ್ತಿ /ಕೋಲುಕಾರ್ತಿ |
| |

## * ತದ್ಧಿತಾಂತ ಭಾವನಾಮಗಳು ( ಪ್ರತ್ಯಯಗಳು – ತನ, ಇಕೆ, ಪು, ಮೆ)

| | | |
|---|---|---|
| ಬಡತನ | ಸಿರಿತನ | ಹಿರಿಮೆ |
| ಜಾಣತನ | ಚಲುವಿಕೆ | ಕಪ್ಪು , ಪೆರ್ಮೆ |

## * ತದ್ಧಿತಾಂತ ಅವ್ಯಯಗಳು ( ಪ್ರತ್ಯಯಗಳು –ಅಂತೆ ,ವೊಲ್ ,ತನಕ ,ವೋಲು , ವರೆಗೆ ,ಇಂತ ,ಆಗಿ ,ಓಸುಗ )

| | | | | | |
|---|---|---|---|---|---|
| ಚಂದ್ರನಂತೆ | ಅವನಂತೆ | ಚಂದ್ರನವೊಲ್ | ಅವನವೊಲ್ | ನನ್ನವೊಲು | ಅವಳವೊಲು |
| ಮನೆಯವೋಲು | ಇದರವೋಲು | ಕರಡಿಯವೋಲ್ | ನದಿಯವೋಲ್ | ಮನೆಯತನಕ | ಹಿಮಾಲಯದತನಕ |
| ಶಾಲೆಯವರೆಗೆ | ಪಟ್ಟಣದವರೆಗೆ | ಇವಳಮಟ್ಟಿಗೆ | ಸುಂದರನಮಟ್ಟಿಗೆ | ನನಗೋಸ್ಕರ | ಬೆಕ್ಕಿಗೋಸ್ಕರ |
| ಅರ್ಜುನನಸಲುವಾಗಿ | ಕಟ್ಟಡದಸಲುವಾಗಿ | ರಾಧೆಗಿಂತ | ಅದಕ್ಕಿಂತ | ನಿನಗಾಗಿ | ಇದಕ್ಕಾಗಿ |
| ಮದುವೆಗೋಸುಗ | ಕಾಗೆಗೋಸುಗ | ಅಂಗರಕ್ಷೆಗೋಸುಕ | | | |

# ೮) ಕೃದಂತಗಳು

## * ಕೃದಂತ ನಾಮಗಳು (ಕೃನ್ನಾಮಗಳು )

| ವರ್ತಮಾನ ಕೃದಂತ | ಭೂತ ಕೃದಂತ | ನಿಷೇಧ ಕೃದಂತ |
|---|---|---|
| ಓಡುವ | ಓಡಿದ | ಓಡದ |
| ಬಾಳುವ | ಬಾಳಿದ | ಬಾಳದ |
| ಬರೆಯುವ | ಬರೆದ | ಬರೆಯದ |

## * ಕೃದಂತ ಭಾವನಾಮ

(ಪ್ರತ್ಯಯಗಳು– ಟ , ವಿಕೆ ,ಇಕೆ ,ಗೆ , ಉದು ,ಇಗೆ ,ಅವು ,ವು ,ತ ,ವಳಿ ,ಪು .)

| | | | | |
|---|---|---|---|---|
| ಓಟ | ನೋಟ | ಬಾಳುವಿಕೆ | ಬರೆಯುವಿಕೆ | ಅಂಜಿಕೆ |
| ನಂಬಿಕೆ | ಉಡುಗೆ | ತೊಡುಗೆ | ನಗುವುದು | ತಿನ್ನುವುದು |
| ಕೊರೆತ | ಮಾಟ | ನೆನಪು | | |

## * ಕೃದಂತ ಅವ್ಯಯಗಳು

( ಪ್ರತ್ಯಯಗಳು – ಉತ್ತ ,ಅದೆ ,ದರೆ ,ಅಲು ,ಅಲಿಕೆ ,ಅ, ಇ ,ದು )

| | | | | |
|---|---|---|---|---|
| ಮಾಡುತ್ತ | ಮಾಡುತ | ಮಾಡದೆ | ಮಾಡಲು | ಮಾಡಲಿಕ್ಕೆ |
| ಮಾಡ | ಮಾಡಿ | ಬರೆದು | | |

# ೯) ದ್ವಿರುಕ್ತಿಗಳು

| | | | | | |
|---|---|---|---|---|---|
| ಸುಡು ಸುಡು | ಒಮ್ಮೊಮ್ಮೆ | ಓಡಿಓಡಿ | ಈಗೀಗ | ದೊಡ್ಡದೊಡ್ಡ | ಹೌದುಹೌದು |
| ನಿಲ್ಲು ನಿಲ್ಲು | ಬಂದೆ ಬಂದೆ | ಹೆಚ್ಚು ಹೆಚ್ಚು | ಮಾಡು ಮಾಡು | ಮನೆ ಮನೆಗಳಲ್ಲಿ | ಕೇರಿ ಕೇರಿಗಳನ್ನು |
| ಅಗೋ ಅಗೋ | ಬನ್ನಿ ಬನ್ನಿ | ಅಬ್ಬಬ್ಬಾ | ಅಹಹಾ | ಬೇಡ ಬೇಡ | ನಡೆ ನಡೆ |
| ಸಾಕು ಸಾಕು | ಹೌದ್ಹೌದು | ಆಗಲಿ ಆಗಲಿ | ಇರಲಿ ಇರಲಿ | ಓಡು ಓಡು | ಬೇಗ ಬೇಗ |
| ಒಬ್ಬೊಬ್ಬ | ದುಂಡು ದುಂಡಾದ | ಮಂಜು ಮಂಜು | ಹೆಜ್ಜೆ ಹೆಜ್ಜೆಗೆ | ಮೊತ್ತ ಮೊದಲು | ಕಟ್ಟ ಕಡೆಗೆ |
| ಕಡೆ ಕಡೆಗೆ | ನಡು ನಡುವೆ | ನಟ್ಟನಡುವೆ | ಬಟ್ಟ ಬಯಲು | ತುತ್ತ ತುದಿ | ಕೊನೆ ಕೊನೆಗೆ |
| ತಿರು ತಿರುಗಿ | ಹಚ್ಚ ಹಸಿರು | ಭಲೇ ಭಲೇ | ನಗು ನಗು | ಜೋರು ಜೋರಾಗಿ | ಚೂರು ಚೂರಾಗಿ |

# ೧೦) ಜೋಡು ನುಡಿ

| | | |
|---|---|---|
| ಸತಿ ಪತಿ | ಕೆನೆ ಮೊಸರು | ಹಾಲ್ಜೇನು |
| ಮಕ್ಕಳು ಮರಿ | ಕಾಫೀ ಗೀಫೀ | ಹುಳ ಹುಪ್ಪಡಿ |

| | | |
|---|---|---|
| ಬಟ್ಟೆ ಬರೆ | ದೇವರು ಗೀವರು | ಸೊಪ್ಪು ಸದೆ |

## ೧೧) ಅವ್ಯಯಗಳು

### * ಸಾಮಾನ್ಯಾವ್ಯಯಗಳು

| | | |
|---|---|---|
| ಬೇಗನೆ | ಮೆಲ್ಲಗೆ | ಸೊಗಸಾಗಿ |
| ಸುಮ್ಮನೆ | ತಟ್ಟನೆ | ತರುವಾಯ |
| ಹಾಗೆ | ಅಂತೂ | ಬೇರೆ |
| ಬಳಿಕ | ಕೂಡಲೆ | ಚೆನ್ನಾಗಿ |

### * ಅನುಕರಣಾವ್ಯಯಗಳು

| | | |
|---|---|---|
| ಚಟ ಚಟ | ಕರ ಕರ | ಚುರು ಚುರು |
| ಧಗ ಧಗ | ರೊಯ್ಯನೆ | ಸುಯ್ಯನೆ |
| ಘುಳು ಘುಳು | ದಡ ದಡ | ಗುಜು ಗುಜು |

### * ಭಾವಸೂಚಕಾವ್ಯಯಗಳು

| | | |
|---|---|---|
| ಆಹಾ ! | ಭಳಿರೆ ! | ಅಯ್ಯೋ ! |
| ಓಹೋ ! | ಹೋ ! | ಅ: ! |
| ಆ: ! | ಓ ! | |

### * ಕ್ರಿಯಾರ್ಥಕಾವ್ಯಗಳು

| | | |
|---|---|---|
| ಅಹುದು | ಸಾಕು | ಅಲ್ಲ |
| ಹೌದು | ಬೇಡ | ಉಂಟು |

### * ಸಂಬಂಧಾರ್ಥಕಾವ್ಯಯಗಳು

| | | |
|---|---|---|
| ಮತ್ತು | ಅಥವಾ | ಆದ್ದರಿಂದ |
| ಊ | ಉಂ | ಅಲ್ಲದೆ |

### * ಅವಧಾರಣಾರ್ಥಕಾವ್ಯಯಗಳು

| | | |
|---|---|---|
| ಅವನೇ | ಅದುವೇ | ನೀನೇ |
| ಅವಳೇ | ಅವರೇ | ಅದೇ |

## ೧೨) ನಾಮಪದ

### * ರೂಢನಾಮ

| | | |
|---|---|---|
| ನದಿ | ಪರ್ವತ | ಊರು |

| | | |
|---|---|---|
| ಮನುಷ್ಯ | ದೇಶ | ಪ್ರಾಣಿ |

*** ಅಂಕಿತನಾಮ**

| | | |
|---|---|---|
| ಸಹದೇವ | ಧರ್ಮರಾಯ | ರಾಹುಲ |
| ಕಮಲಾಕ್ಷ | ಭೀಮ | ರಾಮ |

*** ಅನ್ವರ್ಥನಾಮ**

| | | |
|---|---|---|
| ವ್ಯಾಪಾರಿ | ವಿದ್ವಾಂಸ | ವಿಜ್ಞಾನಿ |
| ಪೂಜಾರಿ | ಶಿಕ್ಷಕ | ಪಂಡಿತ |

*** ಗುಣವಾಚಕ ನಾಮಪದ**

| | | |
|---|---|---|
| ಒಳ್ಳೆಯ | ಕೆಟ್ಟ | ದೊಡ್ಡದು |
| ಹಳತು | ಹಳೆಯ | ಹೊಸದು |

*** ಸಂಖ್ಯಾವಾಚಕ ನಾಮಪದ**

| | | |
|---|---|---|
| ಹನ್ನೆರಡು | ಐವತ್ತು | ಎಂಬತ್ತು |

*** ಸಂಖ್ಯೇಯವಾಚಕ ನಾಮಪದ**

| | | |
|---|---|---|
| ಹನ್ನೆರಡನೆಯ | ಎಂಬತ್ತನೆಯ | ಮೂವರು |

*** ಭಾವನಾಮಗಳು**

| | | |
|---|---|---|
| ಕೆಂಪು | ಹಿರಿಮೆ | ನೋಟ |
| ಆಟ | ಮಾಟ | ಪೆರ್ಮೆ |

*** ಪರಿಮಾಣವಾಚಕ ನಾಮಪದ**

| | | |
|---|---|---|
| ಅಷ್ಟು | ಎಷ್ಟು | ಹಲವು |
| ಅನಿತು | ಇನಿತು | ಕೆಲವು |

*** ದಿಗ್ವಾಚಕ ನಾಮಪದ**

| | | |
|---|---|---|
| ಮೂಡಣ | ಪಡುವಣ | ಈಶಾನ್ಯ |
| ಆಗ್ನೇಯ | ಬಡಗಣ | ತೆಂಕಣ |

೦೩) **ಸರ್ವನಾಮ** *** ಪುರುಷಾರ್ಥಕ ಸರ್ವನಾಮಗಳು**

| ಪುರುಷಗಳು | ಏಕವಚನ | ಬಹುವಚನ |
|---|---|---|
| ಉತ್ತಮ | ನಾನು | ನಾವು |
| ಮಧ್ಯಮ | ನೀನು | ನೀವು |
| ಪ್ರಥಮ/ ಅನ್ಯಪುರುಷ | ಅವನು , ಅವಳು,ಅದು, ಇವನು,ಇವಳು | ಅವರು , ಇವು |

*ಪ್ರಶ್ನಾರ್ಥಕ ಸರ್ವನಾಮಗಳು

| | | |
|---|---|---|
| ಯಾರು ? | ಏನು ? | ಯಾವುದು ? |

* ಆತ್ಮಾರ್ಥಕ ಸರ್ವನಾಮಗಳು

| | | | |
|---|---|---|---|
| ತಾನು | ತಾವು | ತನ್ನ | ತಮ್ಮ |

## 14) ಕ್ರಿಯಾಪದಗಳು

* ಸಕರ್ಮಕ ಕ್ರಿಯಾಪದಗಳು( ಸಕರ್ಮಕ ಧಾತುಗಳು )

| | | | | | | |
|---|---|---|---|---|---|---|
| ಕೊಡು | ಬಿಡು | ಉಣ್ಣು | ತಿನ್ನು | ಉಜ್ಜು | ತಿದ್ದು | ಮುಚ್ಚು |

* ಅಕರ್ಮಕ ಕ್ರಿಯಾಪದಗಳು ( ಅಕರ್ಮಕ ಧಾತುಗಳು )

| | | | | |
|---|---|---|---|---|
| ಮಲಗು | ಓಡು | ಬದುಕು | ಹೋಗು | ನಾಚು |

* ವಿಧ್ಯರ್ಥಕ ಕ್ರಿಯಾಪದಗಳು

| | | |
|---|---|---|
| ಮಾಡಲಿ | ತಿನ್ನಲಿ | ಓದಲಿ |

* ನಿಷೇಧಾರ್ಥಕ ಕ್ರಿಯಾಪದಗಳು

| | | |
|---|---|---|
| ಮಾಡನು | ತಿನ್ನಳು | ಓದರು |

* ಸಂಭವನಾರ್ಥಕ ಕ್ರಿಯಾಪದಗಳು

| | | |
|---|---|---|
| ಮಾಡಿಯಾನು | ತಿಂದಾಳು | ಓದಿಯಾರು |

## 15) ವಿಭಕ್ತಿ ಪ್ರತ್ಯಯಗಳು

| ವಿಭಕ್ತಿಯ ಹೆಸರು | ಕಾರಕಾರ್ಥಗಳು | ಪ್ರತ್ಯಯಗಳು | | ಉದಾಹರಣೆ (ಹಳಗನ್ನಡ) | ಉದಾಹರಣೆ (ಹೊಸಗನ್ನಡ) |
|---|---|---|---|---|---|
| | | ಹಳಗನ್ನಡ | ಹೊಸಗನ್ನಡ | | |
| ಪ್ರಥಮಾ | ಕರ್ತೃರ್ಥ | ಮ್ | ಉ | ಸಾವಿತ್ರಿಯುಮ್ | ಸಾವಿತ್ರಿಯು |
| ದ್ವಿತೀಯಾ | ಕರ್ಮಾರ್ಥ | ಅಮ್ | ಅನ್ನು | ಸಾವಿತ್ರಿಯಂ | ಸಾವಿತ್ರಯನ್ನು |
| ತೃತೀಯಾ | ಕರಣಾರ್ಥ | ಇಂ ,ಇಂದಂ,ಇಂದೆ | ಇಂದ | ಸಾವಿತ್ರಿಯಿಂ | ಸಾವಿತ್ರಿಯಿಂದ |
| ಚತುರ್ಥೀ | ಸಂಪ್ರದಾನ | ಗೆ ,ಕೆ,ಕ್ಕೆ | ಗೆ,ಇಗೆ.ಕೆ,ಅಕ್ಕೆ | ಸಾವಿತ್ರಿಂಗೆ | ಸಾವಿತ್ರಿಗೆ |
| ಪಂಚಮೀ | ಅಪಾದಾನ | ಅತ್ತಣಿಂ, ಅತ್ತಣಿಂದಂ, ಅತ್ತಣಿಂದೆ . | ದೆಸೆಯಿಂದ | ಸಾವಿತ್ರಿಯತ್ತಣಿಂ | ಸಾವಿತ್ರಿಯದೆಸೆಯಿಂದ |
| ಷಷ್ಠೀ | ಸಂಬಂಧ | ಅ | ಅ | ಸಾವಿತ್ರಿಯ | ಸಾವಿತ್ರಿಯ |
| ಸಪ್ತಮೀ | ಅಧಿಕರಣ | ಒಳ್ / ಒಳು | ಅಲ್ಲಿ /ಅಲಿ | ಸಾವಿತ್ರಿಯೊಳ್ | ಸಾವಿತ್ರಿಯಲ್ಲಿ |

## 16) ಲೇಖನ ಚಿಹ್ನೆಗಳು

**ಪೂರ್ಣ ವಿರಾಮ** :–(.) ಒಂದು ಪೂರ್ಣ ಕ್ರಿಯೆಯಿಂದ ಕೂಡಿದ ವಾಕ್ಯದ ಕೊನೆಯಲ್ಲಿ ಈ ಪೂರ್ಣವಿರಾಮ ಚಿಹ್ನೆಯನ್ನು ಬಳಸಬೇಕು.

ಉದಾ – ಮಕ್ಕಳು ಶಾಲೆಗೆ ಸರಿಯಾದ ವೇಳೆಗೆ ಬರಬೇಕು.

**ಅರ್ಧ ವಿರಾಮ** :– (;) ಅನೇಕ ಉಪವಾಕ್ಯಗಳು ಒಂದು ಪ್ರಧಾನ ವಾಕ್ಯಕ್ಕೆ ಅಧೀನವಾಗಿದ್ದಾಗ ಉಪವಾಕ್ಯಗಳು ಮುಗಿದಾಗಲೆಲ್ಲ ಈ ಚಿಹ್ನೆಯನ್ನು ಬಳಸಲಾಗುವುದು .

ಉದಾ–ತಾವು ಕಡಿಮೆ ಮಾತನಾಡಿದ್ದೀರಿ ; ಹೆಚ್ಚು ಕೆಲಸ ಮಾಡಿದ್ದೀರಿ.

**ಅಲ್ಪ ವಿರಾಮ** :– (,) ಸಂಬೋಧನೆಯ ಮುಂದೆ ಹಾಗೂ ಕರ್ತೃ , ಕರ್ಮ , ಕ್ರಿಯಾಪದಗಳಿಗೆ ಬೇರೆ ಬೇರೆ ವಿಶೇಷಣಗಳು ಬರುವಾಗ ಕೊನೆಯ ವಿಶೇಷಣ ಬಿಟ್ಟು ಉಳಿದವುಗಳ ಮುಂದೆ ಅಲ್ಪ ವಿರಾಮ ಬಳಸಬೇಕು.

ಉದಾ–ಬಟ್ಟೆ ಗಿರಣಿ , ರಟ್ಟು , ಪೆನ್ಸಿಲ್ , ಬೆಂಕಿಕಡ್ಡಿ ತಯಾರಿಕಾ ಘಟಕಗಳನ್ನು ಸ್ಥಾಪಿಸಲಾಗಿದೆ.

**ಪ್ರಶ್ನಾರ್ಥಕ ಚಿಹ್ನೆ**:– (?) ಪ್ರಶ್ನ ರೂಪದ ಪದ ಮತ್ತು ವಾಕ್ಯಗಳ ಮುಂದೆ ಪ್ರಶ್ನಾರ್ಥಕ ಚಿಹ್ನೆಯನ್ನು ಬಳಸಲಾಗುವುದು.

ಉದಾ–ಆವುದೀ ಮರುಳು ?

**ಭಾವಸೂಚಕ ಚಿಹ್ನೆ**:– (!) ಹರ್ಷ , ಆಶ್ಚರ್ಯ , ಸಂತೋಷ ,ವಿಷಾದ , ದು:ಖ ಮುಂತಾದ ಭಾವನೆಗಳನ್ನು ಸೂಚಿಸುವ ಪದಗಳ ಮುಂದೆ ಈ ಚಿಹ್ನೆಯನ್ನು ಬಳಸಲಾಗುವುದು.

ಉದಾ– ಅಯ್ಯೋ ! ಹೀಗಾಗಬಾರದಿತ್ತು !

**ಉದ್ಧರಣ ಚಿಹ್ನೆ** :– ( " " ) ಒಬ್ಬರು ಹೇಳಿದ ಮಾತನ್ನೇ ಯಥಾವತ್ತಾಗಿ ಬರೆಯುವಾಗ ಈ ಚಿಹ್ನೆಯನ್ನು ಬಳಸಲಾಗುವುದು.

ಉದಾ– "ಶಿಕ್ಷಣವು ಕೆಲವೇ ಜನರ ಸೊತ್ತಾಗದೆ ಪ್ರಗತಿಪರ ರಾಜ್ಯದಲ್ಲಿ ಎಲ್ಲರ ಆಜನ್ಮಸಿದ್ಧ ಹಕ್ಕಾಗಬೇಕು" ಎಂದು ಸರ್. ಎಂ. ವಿಶ್ವೇಶ್ವರಯ್ಯನವರು ಹೇಳಿದರು .

**ವಾಕ್ಯವೇಷ್ಟನ ಚಿಹ್ನೆ** :– ( ' ' ) ಪಾರಿಭಾಷಿಕ ಪದಗಳನ್ನು ಬಳಸುವಾಗ , ಅನ್ಯ ಬಾಷೆಯ ಪದಗಳನ್ನು ಬಳಸುವಾಗ ಈ ಚಿಹ್ನೆಯನ್ನು ಬಳಸಲಾಗುವುದು.

ಉದಾ– ಕನ್ನಡ ಭಾಷೆಯಲ್ಲಿ 'ಇಂಗ್ಲಿಷ್' , 'ಪರ್ಷಿಯನ್' , ' ಪೋರ್ಚ್‌ಗೀಸ್' ಭಾಷೆಗಳ ಪದಗಳನ್ನು ಬಳಸಲಾಗುತ್ತದೆ.

**ಆವರಣ ಚಿಹ್ನೆ** :– ( ) ಒಂದು ಪದವನ್ನೋ ವಾಕ್ಯವನ್ನೋ ಹೇಳಿ ಅದಕ್ಕೆ ಸಮಾನಾರ್ಥಕ ಪದವನ್ನು ವಾಕ್ಯವನ್ನೋ ಹೇಳುವಾಗ ಈ ಚಿಹ್ನೆಯನ್ನು ಬಳಸಲಾಗುತ್ತದೆ.

ಉದಾ– ನೀರನ್ನು ವಿಭಜಿಸಿದರೆ ಆಮ್ಲಜನಕ ( ಆಕ್ಸಿಜನ್ ) ಜಲಜನಕ (ಹೈಡ್ರೋಜನ್) ಗಳು ಉತ್ಪತ್ತಿಯಾಗುತ್ತವೆ.

**ವಿವರಣಾತ್ಮಕ ಚಿಹ್ನೆ** :– (:–) ಒಂದು ಅಭಿಪ್ರಾಯದ ವಿವರಣೆ ಮುಂದೆ ತಿಳಿಸಿದಂತೆ ಇದೆ ಎಂದು ತೋರಿಸುವ ಸಂದರ್ಭದಲ್ಲಿ ಈ ಚಿಹ್ನೆಯನ್ನು ಬಳಸಲಾಗತ್ತದೆ.

## 17) ವಾಕ್ಯ ಪ್ರಕಾರಗಳು

**ಸಾಮಾನ್ಯ ವಾಕ್ಯ**:– ಒಂದು ಪೂರ್ಣ ಕ್ರಿಯಾಪದದೊಂದಿಗೆ ಸ್ವತಂತ್ರವಾಗಿರುವ ವಾಕ್ಯವನ್ನು ಸಾಮಾನ್ಯವಾಕ್ಯವೆಂದು ಕರೆಯುತ್ತಾರೆ.

ಉದಾ– ಕಾರವಾರದಲ್ಲಿ ಮಲೇರಿಯಾ ಹಬ್ಬಿ , ವೀರೇಶ್ವರ ಪಾಠಕರವರ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರಿ , ಅವರು ಅಲ್ಲಿಂದ ವರ್ಗಾವಣೆ ಹೊಂದುವಂತೆ ಆಯಿತು.

**ಸಂಯೋಜಿತ ವಾಕ್ಯ** :– ಸ್ವತಂತ್ರ ವಾಕ್ಯಗಳಾಗಿ ನಿಲ್ಲಬಲ್ಲ ಅನೇಕ ಉಪವಾಕ್ಯಗಳೊಡನೆ ಒಂದು ಪೂರ್ಣಾಭಿಪ್ರಾಯದ ವಾಕ್ಯವಾಗಿದ್ದರೆ ಅದು ಸಂಯೋಜಿತ ವಾಕ್ಯವೆನ್ನಿಸುವುದು.

ಉದಾ– ಕಾರವಾರದಲ್ಲಿ ಮಲೇರಿಯಾ ಹಬ್ಬಿತ್ತು ; ಆದ್ದರಿಂದ ವೀರೇಶ್ವರ ಪಾಠಕರವರು ಮಲೇರಿಯಾದಿಂದ ಬಳಲಬೇಕಾಯಿತು; ಈ ಕಾರಣದಿಂದ ಅವರನ್ನು ಅಲ್ಲಿಂದ ವರ್ಗಾಯಿಸಲಾಯಿತು.


**ಮಿಶ್ರ ವಾಕ್ಯ** :- ಒಂದು ಅಥವಾ ಅನೇಖ ವಾಕ್ಯಗಳು ಒಂದು ಪ್ರಧಾನ ವಾಕ್ಯಕ್ಕೆ ಅಧೀನಗಳಾಗಿದ್ದರೆ ಅಂತಹ ವಾಕ್ಯವನ್ನು ಮಿಶ್ರ ವಾಕ್ಯ ಎನ್ನುತ್ತೇವೆ.

ಉದಾ- ಏನಾದರೂ ಮಾಡಿ ಭಾರತದಲ್ಲಿ ಮೋಟಾರು ಕಾರ್ಖಾನೆಯನ್ನು ಸ್ಥಾಪಿಸಲು ವಿಶ್ವೇಶ್ವರಯ್ಯನವರು ನಿರ್ಧರಿಸಿದರಾದರೂ ಅವರ ನಿರ್ಧಾರಕ್ಕೆ ಬ್ರಿಟಿಷ್ ಸರ್ಕಾರದ ಅಪ್ಪಣೆ ದೊರೆಯಲಿಲ್ಲವೆಂಬ ವಿಷಯ ತಿಳಿದಾಗ ಅವರು ಬಹುವಾಗಿ ಮರುಗಿದರು.

## 18) ಅಲಂಕಾರಗಳು

### * ಶಬ್ದಾಲಂಕಾರ

ಶಬ್ದ ಅಥವಾ ಪದಗಳ ಜೋಡಣೆಯ ಚಮತ್ಕಾರದ ಮೂಲಕ ಕಾವ್ಯ ಅಥವಾ ಮಾತಿನ ಸೌಂದರ್ಯ ಹೆಚ್ಚಿದರೆ ಅದು ಶಬ್ದಾಲಂಕಾರ.




**ವೃತ್ತ್ಯನುಪ್ರಾಸ**:- ಒಂದು ಅಥವಾ ಎರಡು ವ್ಯಂಜನಾಕ್ಷರಗಳು ಪದ್ಯದ ಸಾಲುಗಳಲ್ಲಿ ಮತ್ತೆ ಮತ್ತೆ ಬಂದರೆ ಅಂದರೆ ಪುನರಾವರ್ತನೆಗೊಂಡರೆ ಅದು ವೃತ್ತ್ಯನುಪ್ರಾಸ.

ಉದಾ ಎಳೆಗಿಳಿಗಳ ಬಳಗಗಳು ನಳನಳಸಿ ಬೆಳೆದ
ಕಳವೆಯ ಎಳೆಯ ಕಾಳಿಗೆ ಎಳಸಿ ಬಂದವು

**ಛೇಕಾನುಪ್ರಾಸ** :-ಎರಡೆರಡು ವ್ಯಂಜನಗಳು ಪುನರಾವರ್ತನೆಗೊಂಡರೆ ಅದು ಛೇಕಾನುಪ್ರಾಸ.

ಉದಾ -

ಕೆಲದೊಳ್ ಪುಳಿಂದಿಯಿರೆ ಪೆ ।
ರ್ಬುಲಿ ಬಂದೊಡಮಂಜನಳ್ಕ *ನೋಡಂ ನೋಡಂ* ॥
ಚಲದಿಂ *ಕಾಡಂ ಕಾಡಂ* ।
ಸಲೆ ಪಸಿವಂ ಮರೆದು ತಣಿದು *ಬೇಡಂ ಬೇಡಂ* ॥

**ಯಮಕ**:- ಮೂರು ಅಥವಾ ಅದಕ್ಕಿಂತ ಹೆಚ್ಚು ಅಕ್ಷರಗಳುಳ್ಳ ಪದವಾಗಲಿ , ಪದಭಾಗವಾಗಲಿ ಒಂದು ಪದ್ಯದ ಆದಿ , ಮಧ್ಯ ಅಥವಾ ಅಂತ್ಯದಲ್ಲಿ ನಿಯತವಾಗಿ ಪುನ: ಪುನ: ಬಂದರೆ ಅದು ಯಮಕ ಅಲಂಕಾರ.

ಉದಾ -

*ಅಮಳ್ಗಳ್ ನಯವಿಕ್ರಮಗುಣ* ।

ದಮಳ್ಗಳ್ ನೃಪಶಾಸ್ತ್ರ ಪರಿಣತರವರಂ ॥

ಸಮರದೊಳಗಗ್ರ ಶೌರ್ಯಂ ।

ಸಮರಸ ಸಂಪನ್ನನಾವನುದಾರನಪ್ಪನ್।

**ಚಿತ್ರಕವಿತ್ವ**

ಪ್ರೌಢಪಂಡಿತ ಕವಿಗಳು ತಮ್ಮ ಬುದ್ಧಿ ಕೌಶಲದಿಂದ ವೈಚಿತ್ರ್ಯಪೂರ್ಣವಾಗಿ ಅಕ್ಷರಗಳನ್ನೂ ,ಪದಗಳನ್ನೂ ಜೋಡಿಸಿ ಪದ್ಯರಚಿಸುವುದಕ್ಕೆ ಚಿತ್ರಕವಿತ್ವ ಅಥವಾ ಬಂಧ ಎಂದು ಕರೆಯುವರು.

ಇದರಲ್ಲಿ ನಿರೋಷ್ಠ್ಯ , ತಾಲವ್ಯ , ಏಕಾಕ್ಷರ,ದ್ವ್ಯಕ್ಷರ,ತ್ರ್ಯಕ್ಷರ ,ಹಾರಬಂಧ ,ಮುರಜಬಂಧ ಇತ್ಯಾದಿ ಪ್ರಕಾರಗಳಿವೆ.

ಉದಾ:–

"ನನ್ದನ ನನ್ದನ ನಿನ್ನೊ
ನನ್ದದ ಮೈ ಮುನ್ದೆನಿನ್ದುದೆನ್ದೆನೆ ಮುದದಿ
ನ್ದನ್ದಿನ್ದುನ್ದೆನ್ನದೆ ನೀ
ನೆನ್ದುಂ ಮನ್ನನದೆ ನೆಮ್ಮಿನಿನ್ದೀಮುದದಿಂ"

ಇಲ್ಲಿ ಕವಿ ಬುದ್ಧಿಪೂರ್ವಕವಾಗಿ ಶಬ್ದಗಳ್ನು ಬಳಸಿದ್ದರಿಂದ ಇದೊಂದು ಶಬ್ದಾಟದಂತಿದೆ.

**ಅರ್ಥಾಲಂಕಾರ**

ಅರ್ಥ ಚಮತ್ಕಾರದಿಂದ ಕಾವ್ಯದ ಸೌಂದರ್ಯವನ್ನು ಹೆಚ್ಚಿಸುವುದೇ ಶಬ್ದಾಲಂಕಾರ.

ಇದರಲ್ಲಿ ೧೦೦ ಕ್ಕೂ ಹೆಚ್ಚಿನ ಅಲಂಕಾರಗಳಿವೆ ಪ್ರಮುಖವಾದವುಗಳನ್ನು ಮಾತ್ರ ಇಲ್ಲಿ ಅಭ್ಯಾಸ ಮಾಡೋಣ.

**೧) ಉಪಮಾ ಅಲಂಕಾರ**

**೨) ರೂಪಕ ಅಲಂಕರ**

**೩) ಉತ್ಪ್ರೇಕ್ಷೆ ಅಲಂಕಾರ**

**೪) ದೃಷ್ಟಾಂತ ಅಲಂಕಾರ**

**೫) ಶ್ಲೇಷಾ ಅಲಂಕಾರ**

## ೬) ಅರ್ಥಾಂತರನ್ಯಾಸ ಅಲಂಕಾರ

**೧) ಉಪಮಾ ಅಲಂಕಾರ** :- ಎರಡು ವಸ್ತುಗಳ ನಡುವೆ ಅಂದರೆ ಉಪಮೇಯ ಹಾಗೂ ಉಪಮಾನಗಳ ನಡುವೆ ಅರ್ಥಸಾದೃಶ್ಯದಿಂದ ಪರಸ್ಪರ ಹೋಲಿಕೆ ಕಂಡು ಬಂದರೆ ಅದು ಉಪಮಾ ಅಲಂಕಾರ.

* ನೀಚರಿಗೆ ಮಾಡಿದ ಉಪಕಾರವು ಹಾವಿಗೆ ಹಾಲೆರೆದಂತೆ
* ಭೀಮ ದುರ್ಯೋಧನರು ಮದಗಜಗಳಂತೆ ಹೋರಾಡಿದರು.
* ಒಳಗಿನ ಮಂದಿ ಗುಂಡು ಹೊಡಿಸಿದರೊ ಮುಂಗಾರಿ ಸಿಡಿಲ ಸಿಡಿದ್ಹಾಂಗ.
* ಸಿಡಿಲ ಸಿಡಿದ್ಹಾಂಗ ಗುಂಡು ಸುರಿದಾವ.
* ಸತಿಪತಿಗಳೊಂದಾಗದವನ ಭಕ್ತಿ ಅಮೃತದೊಳು ವಿಷ ಬೆರೆದಂತೆ .
* ಸಾಮಗ್ರಿ ಸೌಕರ್ಯಗಳ ಮೇಲೆ ನಿಂತ ಸಾಧನೆ ತಪಸ್ಸು ಮರವನ್ನು ಆಶ್ರಯಿಸಿ ಬೆಳೆದ ಬಳ್ಳಿಯಂತೆ ಅದಕ್ಕೆ ಸ್ವಯಂ ಪೂರ್ಣತೆ ಇಲ್ಲ.
* ಬಳಾರಿಯ ಮನೆಯಂ ಪರಕೆಯ ಕುರಿಯಂ ಪುಗಿಸುವಂತೆ ವಟವಿಟಪಿ ಕೋಟರಕುಟೀರಾಂತರಮಂ ಪುಗಿಸಿ.
* ದುಷ್ಟ ಬುದ್ಧಿಯ ಮನೆಯೊಳ್ ಕಿಚ್ಚನಿಕ್ಕುವಂತೆ .
* ಮರನೇರಿದ ಮರ್ಕಟನಂತೆ .
* ಅಂದಣವೇರಿದ ಸೊಣಗನಂತೆ .
* ನುಡಿದರೆ ಮುತ್ತಿನ ಹಾರದಂತಿರಬೇಕು .
* ನುಡಿದರೆ ಮಾಣಿಕ್ಯದ ದೀಪ್ತಿಯಂತಿರಬೇಕು .
* ನುಡಿದರೆ ಸ್ಫಟಿಕದ ಶಲಾಕೆಯಂತಿರಬೇಕು .

### ೨) ರೂಪಕ ಅಲಂಕಾರ

ಉಪಮೇಯ ಹಾಗೂ ಉಪಮಾನಗಳ ನಡುವೆ ಅಭೇದ ಕಲ್ಪಿಸಿ ಹೇಳುವುದೇ ರೂಪಕ ಅಲಂಕಾರ. ಇದರಲ್ಲಿ ಅಭೇದ ರೂಪಕ ಮತ್ತು ತಾದ್ರೂಪ್ಯರೂಪಕ ಎಂದು ಎರಡು ವಿಧಗಳಿವೆ .

ಉದಾ :-

* ಅಳ್ಳಿರಿಯುತಿಪ್ಪ ಎಮ್ಮ ಒಡಲಬೇಗೆಯ ಬೆಂಕಿಯುರಿ ನಿನ್ನನಿರಿಯದೆ ಪೇಳು ವಿಶ್ವಾಮಿತ್ರ .
* ಮಾರಿಗೌತಣವಾಯ್ತು ನಾಳಿನ ಭಾರತ
* ಶೋಕದುಲ್ಕೆ
* ಕನಸಿನಿರುಳ
* ಸೀತೆಯ ಮುಖಕಮಲ ಅರಳಿತು .

### ೩) ದೃಷ್ಟಾಂತ ಅಲಂಕಾರ

ಎರಡು ಬೇರೆ ಬೇರೆ ವಾಕ್ಯಗಳಲ್ಲಿ ಅರ್ಥ ಸಾದೃಶ್ಯದಿಂದ ಬಿಂಬ ಪ್ರತಿಬಿಂಬ ಭಾವವು ತೋರಿ ಬಂದರೆ ಅದು ದೃಷ್ಟಾಂತ ಅಲಂಕಾರ .

ಉದಾ – ಮಾತು ಬಲ್ಲವನಿಗೆ ಜಗಳವಿಲ್ಲ ; ಊಟ ಬಲ್ಲವನಿಗೆ ರೋಗವಿಲ್ಲ.

**೪) ಉತ್ಪ್ರೇಕ್ಷಾಲಂಕಾರ**

ಉಪಮೇಯವಾದ ವಸ್ತುವನ್ನು ಅಥವಾ ಸನ್ನಿವೇಶವನ್ನು ಉಪಮಾನವಾದ ವಸ್ತುವನ್ನಾಗಿ ಅಥವಾ ಸನ್ನಿವೇಶವನ್ನಾಗಿ ಕಲ್ಪಿಸುವುದೇ ಉತ್ಪ್ರೇಕ್ಷಾಲಂಕಾರ.

ಉದಾ–ಅಚ್ಛೋದ ಸರೋವರವು ತ್ರೈಲೋಕ್ಯ ಲಕ್ಷ್ಮೀಯು ತನ್ನ ಸೌಂದರ್ಯವನ್ನು ನೋಡಲು ಮಾಡಿಟ್ಟ ರನ್ನಗನ್ನಡಿಯೋ ಎಂಬಂತೆ ಶೋಭಿಸಿತು.

**೫) ಅರ್ಥಾಂತರನ್ಯಾಸ ಅಲಂಕಾರ**

ಒಂದು ವಿಶೇಷ ವಾಕ್ಯವನ್ನು ಸಾಮಾನ್ಯ ವಾಕ್ಯದಿಂದ ಅಥವಾ ಸಾಮಾನ್ಯ ವಾಕ್ಯವನ್ನು ವಿಶೇಷ ವಾಕ್ಯದಿಂದ ಸಮರ್ಥನೆ ಮಾಡುವುದೇ ಅರ್ಥಾಂತರನ್ಯಾಸ ಅಲಂಕಾರ.

ಉದಾ – * ಆತನು ಪರೀಕ್ಷೆಯಲ್ಲಿ ಪ್ರಥಮ ಸ್ಥಾನ ಪಡೆದು ಉತ್ತೀರ್ಣನಾದನು . ಬುದ್ಧಿವಂತರಾದ ಮಕ್ಕಳಿಗೆ ಪರೀಕ್ಷೆಯೊಂದು ಲೆಕ್ಕವೇ ?

* ಜಲನಿಧಿಜಲಮಂ ಜಲಭೃ ।
ತ್ಕುಲಕ್ಕೆ ನಲಿದಿತ್ತುದತ್ತಮಿತ್ತನದೀನಿ ।
ರ್ಮಲ ಸಲಿಲಂ ದೊರೆದುದು ಗಡ ।
ನೆಲದೊಳ್ ಕೊಟ್ಟಂಗೆ ಬಡತನಂ ಬಂದಪುದೇ ॥

**೬) ಶ್ಲೇಷಾಲಂಕಾರ**

ಒಂದು ಪದವು ಒಂದಕ್ಕಿಂತ ಹೆಚ್ಚು ಅರ್ಥಕೊಡುವಂತಿದ್ದರೆ ಅಂತಹ ಪದಕ್ಕೆ ' ಶ್ಲೇಷ ಪದ ' ಎಂದು ಹೆಸರು.

ಇಂತಹ ಶ್ಲೇಷಾರ್ಥಗಳನ್ನು ನೀಡಬಲ್ಲ ಪದಗಳಿರುವ ಅಲಂಕಾರವೇ ಶ್ಲೇಷಾಲಂಕಾರ.

ಉದಾ – ಅತಿಶಯ ಪದಾರ್ಥ ನಿಕರ ।
ಪ್ರತೀತಿಯಂ ಪಡೆವ ಪಾದ ವಿನ್ಯಾಸಂ ಭೂ ॥
ನುತಮಾಗದಲ್ತೆನಿರ್ದೋ ।
ಷತೆಯಿಂದಲ್ಲದೆ ಸಮಂತು ಕವಿಗಂ ರವಿಗಂ ॥

**೧೯) ಛಂದಸ್ಸು**

**ಕಂದ ಪದ್ಯ**

ಉದಾ :- ೧) ಅತಿಕುಟಿಲಮನಂ ಧನಲು
ಬ್ಧತೆಯಿಂದಂ ದುಷ್ಟಬುದ್ಧಿ ನುಡಿದಂ ಪುಸಿಯಂ
ಮತಿಗೆಟ್ಟು ' ತಸ್ಕರಸ್ಯಾ
ನೃತಂ ಬಲಂ' ಎನಿಪ ವಾಕ್ಯವಂ ನೆನೆಯುತ್ತುಂ .

೨) ನೀನುಳ್ಳೊಡೆಲ್ಲರೊಳರೆಮ ।
ಗೇನುಮಳಲ್ ಮನದೊಳಿಲ್ಲದೆಂತೆನೆ ಮಗನೇ ॥
ಭಾನುವೆ ಸಾಲದೆ ಪಗಲೆನಿ ।
ತಾನುಂ ದೀವಿಗೆಗಳುರಿದೊಡೇಂ ನಂದಿದೊಡೇಂ ॥

೩) ಒಡೆಯಲ ಜಾಂಡಂ ಕುಲಗಿರಿ ।
ಕೆಡೆಯಲ್ ನಡುಗಲ್ಕೆಧಾತ್ರಿ ದಿವಿಜರ್ ಶೆಡೆಯ ॥
ಲ್ತೊಡರಿಸು ವಿನಂಜಟಾಸುರ ।
ಹಿಡಿಂಬ ಬಕವೈರಿ ಸಿಂಹನಾದಂಗೆಯ್ದಂ ॥

## ಷಟ್ಪದಿ

### ಭಾಮಿನಿ ಷಟ್ಪದಿ

ಏನು ಹೇಳೈ ಕರ್ಣ ಚಿತ್ತ
ಗ್ಲಾನಿ ಯಾವುದು ಮನಕೆ ಕುಂತೀ
ಸೂನುಗಳ ಬೆಸಕೈಸಿಕೊಂಬುದು ಸೇರದೇ ನಿನಗೆ
ಹಾನಿಯಲ್ಲೆನ್ನಾಣೆ ನುಡಿ ನುಡಿ
ಮೌನವೇತಕೆ ಮರುಳುತನ ಬೇ
ಡಾನು ನಿನ್ನಪದೆಸೆಯ ಬಯಸುವನಲ್ಲ ಕೇಳೆಂದ

### ವಾರ್ಧಕ ಷಟ್ಪದಿ

ಉರ್ವಿಯೊಳ್ ಕೌಸಲ್ಯೆ ಪಡೆದ ಕುವರಂ ರಾಮ
ನೊರ್ವನೇ ವೀರನಾತನ ಯಜ್ಞ ತುರಗಮಿದು
ನಿರ್ವಹಿಸಲಾರ್ಪರಾರಾದೊಡಂ ತಡೆಯಲೆಂದಿರ್ದ ಲೇಖನವನೋದಿ
ಗರ್ವಮಂ ಬಿಡಿಸದಿರ್ದೊಡೆ ತನ್ನ ಮಾತೆಯಂ
ಸರ್ವಜನಮುಂ ಬಂಜೆಯೆನ್ನದಿರ್ದಪುದೆ ತನ
ಗುರ್ವತೋಳ್ಗಳಿವೇತಕೆಂದು ಸಲೆ ವಾಸಿಯಂ ತೊಟ್ಟು ಲವನುರಿದೆದ್ದನು

## * ಖ್ಯಾತ ಕರ್ಣಾಟಕ ವೃತ್ತಗಳು

### * ಉತ್ಪಲ ಮಾಲಾ ವೃತ್ತ

ಉದಾ :–

ಮೇದಿನಿಯಂ ಕ್ರಮಕ್ರಮದೆ ಪರ್ವಿದುದಾತನಭೋವಿಭಾಗಮಾ
ಚ್ಛಾದಿತಜ್ಝುಖಂ ವ್ಯವಹಿತಾಖಿಲದೃಷ್ಟಿಪಥಂ ತಮಾಲ ಭೃಂ
ಗೋದರ ನೀರದಾಗಮ ಘನ ಪ್ರಕರಾಂಜನ ಪುಂಜ ಕೋಕಿಲಾ
ಬ್ಜೋದರಕಾಯಕಾಂತಿ ಶಿತಿಕಂಠಗಳಪ್ರತಿಮಪ್ರಭಂ ತಮಂ

### * ಚಂಪಕ ಮಾಲಾ ವೃತ್ತ

ಉದಾ;–

ಕುರುಕುಳನಂದನಂ ಪವನನಂದನನೆಂಬ ಮದಾಂಧಗಂಧಸಿಂ
ಧುರಮೆ ಕರುತ್ತು ಪಾಯೆ ಪಡಲಿಟ್ಟವೊಲಾದುದು ಪುಣ್ಯದೊಂದು ಪೆ
ರ್ಮರನುಳಿವಂತೆ ನೀನುಳಿದೆಯಿನ್ನಿರಿವನ್ನರುಮಿಲ್ಲ ಮುತ್ತರುಂ
ಕುರುಡರುಮೆನ್ನದೆಮ್ಮ ನುಡಿಗೇಳ್ ಮಗನೇ ಬಗೆ ತಂದೆಗಿಂಬುಕೆಯ್

### * ಮತ್ತೇಭವಿಕ್ರೀಡಿತ ವೃತ್ತ

ಉದಾ

ಎನಗಂ ಪಾಂಡುಗಮಿಲ್ಲ ಭೇದಮಿಳೆಯಂ ಪಚ್ಚಾಳ್ವಮಾ ಪಾಂಡುನಂ
ದನರುಂ ಸೈದರೆ ನಿನ್ನೊಳೀ ಕಲಹಮುಂ ನಿನ್ನಿಂದಮಾಯ್ತೆಂದೊಡಿಂ
ಮುನಿವೈ ಗಂಗೆಯ ಪೆರ್ಮಗಂಗೆ ಘಟಸಂಭೂತಂಗೆ ಕರ್ಣಂಗಸಾ
ಧ್ಯನೊಳಾ ಗಾಂಡಿವಿಯೊಳ್ ಕರುತ್ತಿರಿವರಾರಿಂ ಮಾಡುವಂ ಸಂಧಿಯಂ.

### *ಅಕ್ಷರ ಗಣದ ಸೂತ್ರ

ಗುರು ಲಘು ಮೂರಿರೆ ಮ–ನ– ಗಣ ।
ಗುರು ಲಘು ಮೊದಲಲಿ ಬರಲು ಭ– ಯ–ಗಣಮೆಂಬರ್ ॥
ಗುರು ಲಘು ನಡುವಿರೆ ಜ–ರ–ಗಣ ।
ಗುರು ಲಘು ಕೊನೆಯಲಿ ಬರಲು ಸ–ತ – ಗಣಮಕ್ಕುಂ ॥

## * ಖ್ಯಾತ ಕರ್ಣಾಟಕ ವೃತ್ತಗಳ ಸೂತ್ರ

ಗುರುವೊಂದಾದಿಯೊಳುತ್ಪಲಂ ಗುರುಮೊದಲ್ ಮೂರಾಗೆ ಶಾರ್ದೂಲಮಾ ।

ಗುರುನಾಲ್ಕಾಗಿರಲಂತು ಸ್ರಗ್ಧರೆ ಲಘುದ್ವಂದ್ವಂ ಗುರುದ್ವಂದ್ವಮಾ ।

ಗಿರೆ ಮತ್ತೇಭ ಲಘುದ್ವಯ ತ್ರಿಗುರುವಿಂದಕ್ಕುಂ ಮಹಾ ಸ್ರಗ್ಧರಾ ।

ಹರಿಣಾಕ್ಷೀ , ಲಘು ನಾಲ್ಕು ಚಂಪಕಮಿವಾರುಂ ಖ್ಯಾತಕರ್ಣಾಟಕಂ ॥

## ರಗಳೆ

### * ಉತ್ಸಾಹ ರಗಳೆ

ಉದಾ :–

೧) ಕುಳಿರ್ವ ಪೂಗೊಳಂಗಳಲ್ಲಿ
ತಳಿರ ಕಾವಣಂಗಳಲ್ಲಿ
೨) ಮಾವಿನೆಡೆಯೊಳಾಡುತುಂ
ಪಾಡನೆಯ್ದೆ ಕೇಳುತಂ

### * ಮಂದಾನಿಲ ರಗಳೆ

ಉದಾ :–

೧) ಪಂಕಜದಂತಿರೆ ಪುಟ್ಟಿದಳೊಲವಿಂ
ಪಂಕವನೆಂದುಂ ಪೊರ್ದದೆ ನಲವಿಂ

೨) ಸುತ್ತಲುಂ ಪರಿವಜರಿವೊನಲ್ಗಳಿಂ
ಎತ್ತಲುಂ ನಲಿವ ಪೊಸನವಿಲ್ಗಳಿಂ

### * ಲಲಿತ ರಗಳೆ

ಉದಾ :–

ಸೊಂಪಿನಿಂ ಕಂಪಿಡುವ ಸಂಪಗೆಗಳಂಕೊಂಡು

ಹೊಂಪೆಸೆವ ಹೊಂಗೇದಗೆಯ ಹೂಗಳಂಕೊಂಡು.

*** ಪ್ರಾಸ**

*** ಸಿಂಹ ಪ್ರಾಸ :–** ಪ್ರಾಸಾಕ್ಷರದ ಹಿಂದಿನ ಸ್ವರವು ಹ್ರಸ್ವವಾಗಿದ್ದರೆ ಅದು ಸಿಂಹ ಪ್ರಾಸ.

*** ಗಜ ಪ್ರಾಸ :–** ಪ್ರಾಸಾಕ್ಷರದ ಹಿಂದಿನ ಸ್ವರವು ದೀರ್ಘವಾಗಿದ್ದರೆ ಅದು ಗಜ ಪ್ರಾಸ.

*** ವೃಷಭ ಪ್ರಾಸ :–** ಪ್ರಾಸಾಕ್ಷರದ ಹಿಂದೆ ಅನುಸ್ವಾರವಿದ್ದರೆ ಅದು ವೃಷಭ ಪ್ರಾಸ.

*** ಅಜ ಪ್ರಾಸ :–** ಪ್ರಾಸಾಕ್ಷರದ ಹಿಂದೆ ವಿಸರ್ಗವಿದ್ದರೆ ಅದು ಅಜ ಪ್ರಾಸ.

*** ಶರಭ ಪ್ರಾಸ :–** ಬೇರೆ ಬೇರೆ ಜಾತಿಯ ಎರಡು ಮೂರು ವ್ಯಂಜನಗಳು ಪ್ರಾಸಾಕ್ಷರಗಳಾಗಿದ್ದರೆ ಅದು ಶರಭ ಪ್ರಾಸ.

*** ಹಯ ಪ್ರಾಸ :–** ಒಂದೇ ಜಾತಿಯ ಎರಡು ವ್ಯಂಜನಗಳು ಪ್ರಾಸಾಕ್ಷರಗಳಾಗಿದ್ದರೆ ಅದು ಹಯ ಪ್ರಾಸ.

*** ಯತಿ**

ಕಾವ್ಯವನ್ನು ಓದುವಾಗ ಅಥವಾ ಹಾಡುವಾಗ ಉಸಿರು ತೆಗೆದುಕೊಳ್ಳುವ ಸಲುವಾಗಿ ನಿಲ್ಲಿಸುವ ಸ್ಥಳವೇ ಯತಿ

*** ಅಂಶ ಗಣ**

೧) ಬ್ರಹ್ಮ ಗಣ ೨) ವಿಷ್ಣು ಗಣ ೩) ಶಿವ ಗಣ ( ರುದ್ರ )